ಆ) ಖಾಯಂ ಆಲ್ಲದ ನೌಕರರುಗಳಿಗೆ ಯಾವ ರೀತಿಯಲ್ಲಿ ಇಲಾಖೆಯು ಪರಿಗಣನೆ ಮಾಡುತ್ತಿದೆ;

ಈ ನೌಕರರನ್ನು ಖಾಯಂ ಮಾಡಲು ಸರ್ಕಾರವು ಏನಾದರೂ ಕ್ರಮ ಕೈಗೊಂಡಿದೆಯೇ; ಖಾಯಂಗೊಳಿಸಲು ಕ್ರಮ ಕೈಗೊಂಡಿದ್ದಲ್ಲಿ ಅದರ ಮಾನದಂಡವೇನು; ಹಾಗೂ ಯಾವಾಗ ಖಾಯಂಗೊಳಿಸಲಾಗುವುದು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) ರಾಜ್ಯಾದ್ಯಂತ 3246 ಗ್ರಂಥಾಲಯಗಳು ಇರುತ್ತವೆ.

ಈ ಗ್ರಂಥಾಲಯಗಳಲ್ಲಿ 1302 ಖಾಯಂ ನೌಕರರು ಇರುತ್ತಾರೆ.

160 ಶುಚಿಗಾರರು ಹಂಗಾಮಿಯಾಗಿ ಹಾಗೂ ಇಲಾಖೆಯ ಅಧೀನಕ್ಕೊಳಪಡುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಗೌರವ ಸಂಭಾವನೆ ಪಡೆಯುವ 2728 ಮೇಲ್ವಿಚಾರಕ ಸಿಬ್ಬಂದಿಗಳಿರುತ್ತಾರೆ.

ಆ) ಈ ನೌಕರರನ್ನು ಮಾಸಿಕ ಗೌರವ ಸಂಭಾವನೆಯ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಎಂದು ಪರಿಗಣಿಸಿದೆ.

ಇ) ಪ್ರಸಕ್ತ ನಿಯಮಾವಳಿಗಳಲ್ಲಿ ಈ ನೌಕರರನ್ನು ಖಾಯಂ ಮಾಡಲು ಅವಕಾಶ ಇರುವುದಿಲ್ಲ.

ಅನ್ವಯಿಸುವುದಿಲ್ಲ.

ಅನ್ವಯಿಸುವುದಿಲ್ಲ.

ರಾಜ್ಯದಲ್ಲಿ ಖಾಲಿ ಇರುವ ಸರ್ಕಾರಿ ಅನುದಾನಿತ ಪ್ರೌಢ-ಪ್ರಾಥಮಿಕ ಶಾಲೆಗಳ ಶಿಕ್ಷಕರ ಹುದ್ದೆಗಳ ಭರ್ತಿ

1228(1608) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಅನುದಾನಿತ ಪ್ರೌಢ-ಪ್ರಾಥಮಿಕ ಶಾಲೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಈ ಶಾಲೆಗಳಲ್ಲಿರುವ ಖಾಲಿ ಹುದ್ದೆಗಳು ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಖಾಲಿ ಹುದ್ದೆಗಳ ಭರ್ತಿಗೆ ಕೈಗೊಂಡಿರುವ ಕ್ರಮಗಳೇನು;

ಈ) ರಾಜ್ಯದ ಅನುದಾನಿತ ಪ್ರಾಥಮಿಕ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕದ ಮೇಲೆ ನಿಷೇಧ ಹೇರಲಾಗಿದ್ದುದು ನಿಜವೇ; ನಿಷೇಧ ಹೇರಿದ್ದು ಯಾವಾಗ;

ಉ) ನಿಷೇಧವನ್ನು ರದ್ದುಪಡಿಸಲಾಗಿದೆಯೇ; ರದ್ದುಪಡಿಸಿದ್ದಲ್ಲಿ, ಎಂದು ರದ್ದುಪಡಿಸಲಾಗಿದೆ?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಅನುದಾನಿತ ಪ್ರೌಢಶಾಲೆಗಳು - 2,524

ಅನುದಾನಿತ ಪ್ರಾಥಮಿಕ ಶಾಲೆಗಳು - 2,422

(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಅ) ಅನುದಾನಿತ ಪ್ರೌಢಶಾಲೆಗಳು - 1,873
ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ - 459
(ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ)

ಇ) ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 2001 ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿದ್ದು, ಅವರುಗಳನ್ನು ಖಾಲಿ ಇರುವ ಮಂಜೂರಾದ ಅನುದಾನಿತ ಹುದ್ದೆಗಳಿಗೆ ಮರುಹಂಚಿಕೆ ಮೂಲಕ ಭರ್ತಿ ಮಾಡಲಾಗುವುದು. ಇನ್ನು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ 2001-02ನೇ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅವರುಗಳನ್ನು ಅನುದಾನಿತ ಖಾಲಿ ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ಮರ ಹಂಚಿಕೆ ಮಾಡುವ ಕಾರ್ಯವು ಮುಕ್ತಾಯದ ಹಂತದಲ್ಲಿದ್ದು ಶೀಘ್ರವೇ ಅನುದಾನಿತ ಪ್ರೌಢಶಾಲೆಗಳಲ್ಲಿ ಬಾಕಿ ಉಳಿಯುವ ಅಗತ್ಯ ಹುದ್ದೆಗಳನ್ನು ತುಂಬಲು ಹಾಲಿ ಇರುವ ನಿರ್ಬಂಧವನ್ನು ಸಡಿಲಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಹೌದು, ನಿಷೇಧ ಹೇರಲಾಗಿದೆ.
ದಿನಾಂಕ 1.6.99 ರಿಂದ ನಿಷೇಧ ಇದೆ.

ಉ) ರದ್ದುಪಡಿಸಿರುವುದಿಲ್ಲ.

ಕ್ರ. ಸಂ.	ಜಿಲ್ಲೆಯ ಹೆಸರು	ಅನುದಾನಿತ ಪ್ರಾಥಮಿಕ ಶಾಲೆಗಳ ಸಂಖ್ಯೆ	ಖಾಲಿಹುದ್ದೆಗಳ ಸಂಖ್ಯೆ	ಅನುದಾನಿತ ಪ್ರೌಢಶಾಲೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
1	ಬೆಂಗಳೂರು ಉತ್ತರ	256	38	106	38
2	ಬೆಂಗಳೂರು ದಕ್ಷಿಣ	297	67	121	68
3	ಬೆಂಗಳೂರು ಗ್ರಾಮಾಂತರ	28	00	80	42
4	ಕೋಲಾರ	62	20	49	22
5	ಚಿಕ್ಕಬಳ್ಳಾಪುರ ಕೋಲಾರ ಉತ್ತರ	-	-	-	-
6	ತುಮಕೂರು	57	09	240	51
7	ತುಮಕೂರು ಉತ್ತರ	-	05	-	30
8	ಶಿವಮೊಗ್ಗ	50	06	83	68
9	ಚಿತ್ರದುರ್ಗ	63	12	131	28
10	ದಾವಣಗೆರೆ	94	06	85	31
11	ಮೈಸೂರು	118	29	85	19
12	ಚಾಮರಾಜನಗರ	32	18	27	31
13	ಮಂಡ್ಯ	37	19	62	14
14	ಹಾಸನ	36	13	198	46
15	ಚಿಕ್ಕಮಗಳೂರು	19	-	79	33
16	ಕೊಡಗು	11	06	45	43
17	ದಕ್ಷಿಣ ಕನ್ನಡ	247	04	107	06

1	2	3	4	5	6
18	ಉಡುಪಿ	285	05	59	24
19	ಬೆಳಗಾಂ	33	17	253	182
20	ಬೆಳಗಾಂ ಉತ್ತರ	-	05	-	165
21	ಬಿಜಾಪುರ	115	10	131	132
22	ಬಾಗಲಕೋಟೆ	41	27	79	156
23	ಧಾರವಾಡ	58	26	96	130
24	ಗದಗ್	13	11	73	89
25	ಹಾವೇರಿ	19	12	92	126
26	ಉತ್ತರ ಕನ್ನಡ	23	12	119	63
27	ಗುಲ್ಬರ್ಗ	172	14	54	10
28	ಗುಲ್ಬರ್ಗ ಉತ್ತರ	-	19	-	11
29	ಬಳ್ಳಾರಿ	58	25	60	20
30	ರಾಯಚೂರು	18	-	20	30
31	ಕೊಪ್ಪಳ	07	-	22	25
32	ಬೀದರ್	173	24	68	27
	ಒಟ್ಟು	2422	459	2524	1873

ಪ್ರಾಥಮಿಕ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಹುದ್ದೆಗಳ ನೇಮಕ

1229(1610) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಮತ್ತು ಪ್ರೌಢಶಾಲೆ ಮುಖ್ಯೋಪಾಧ್ಯಾಯರ ಹುದ್ದೆಗೆ ಬಡ್ತಿ ಆಧಾರದ ಮೇಲೆ ನೇಮಕ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೆ;

ಆ) ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ;

ಇ) ಮುಖ್ಯೋಪಾಧ್ಯಾಯರ ಹುದ್ದೆಗೆ ಈವರೆಗೂ ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು ಈ ನೀತಿಯನ್ನು ಈಗ ಕೈಬಿಡಲು ಕಾರಣಗಳೇನು;

ಈ) ಬಡ್ತಿ ಆಧಾರದ ಮೇಲೆ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ?

ಪೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು): ಅ) 1) ಹುದ್ದೆಗಳು ಖಾಲಿಯಾದಂತೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳಿಗೆ ಬಡ್ತಿಯನ್ನು ಜೇಷ್ಠತಾನುಸಾರ ಜಿಲ್ಲಾ ಮಟ್ಟದಲ್ಲಿ ನೀಡಲಾಗುತ್ತಿದೆ.

2) ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದದ ಬಡ್ತಿ ಹುದ್ದೆಗಳು ಖಾಲಿಯಾದ ತಕ್ಷಣ ಸ್ಥಾನಪನ್ನ ಪದೋನ್ನತಿ ಮೂಲಕ ತುಂಬಲಾಗುತ್ತದೆ.